ಕಡಿತಗೊಳಿಸಿದ. ಅವನ ನಿರುತ್ಸಾಹವನ್ನು ಕಂಡು ಮಾತು ಪ್ರಾರಂಭಿಸಿದವರೂ ಸುಮ್ಮನಾದರು.

ವಸಂತಪುರದಲ್ಲಿ ಬಸ್ಸು ಇಳಿದು ಮನೆಗೆ ಬಂದಾಗ ಮಧ್ಯಾಹ್ನವಾಗಿತ್ತು. ಅಣ್ಣ ಕೃಷ್ಣೇಗೌಡ ಮನೆಯಲ್ಲಿರಲಿಲ್ಲ. ಅತ್ತಿಗೆ ಸಂಪಿಗಮ್ಮನೇ ಬಾಯಿ ತುಂಬಾ ಮಾತನಾಡಿಸಿ 'ಮನೆಯಲ್ಲಿ ಎಲ್ಲರೂ ಚೆನ್ನಾಗಿದ್ದಾರಾ...' ಎಂದು ಕೇಳಿ ಒಬ್ಬೊಬ್ಬರ ಯೋಗಕ್ಷೇಮವನ್ನೂ ವಿಚಾರಿಸಿದಳು. ಕೇಶವ, ತಾನು ಬಂದ ವಿಷಯವೇನೆಂದು ಸೀದಾಸಾದ ಅತ್ತಿಗೆಯ ಬಳಿ ಹೇಳಲು ಸಿದ್ಧನಿರಲಿಲ್ಲ. ಅಣ್ಣನ ಉಪಸ್ಥಿತಿಯಲ್ಲಿಯೇ ವಿಷಯವನ್ನು ಪ್ರಸ್ತಾಪಿಸುವುದು ಸರಿ ಎಂದು ಅವನಿಗೆ ಅನಿಸಿತ್ತು. 'ಸ್ವಲ್ಪ ಕೃಷ್ಣಣ್ಣನ ಜೊತೆ ಮಾತನಾಡಬೇಕಿತ್ತು... ಅದಕ್ಕೇ ಬಂದೆ...' ಎಂದು ಮೆಲುದನಿಯಲ್ಲಿ ಅಲವತ್ತುಕೊಂಡಾಗ ಸಂಪಿಗಮ್ಮ ಕೆಳಗಿನ ಬೀದಿಯಲ್ಲಿ ಹುಡುಗರೊಂದಿಗೆ ಆಟವಾಡುತ್ತಿದ್ದ ತನ್ನ ಮಗ ಜಯರಾಮನನ್ನು ಕೂಗಿ ಕರೆದು ತೋಟದ ಹತ್ತಿರ ಹೋಗಿ ಚಿಕ್ಕಪ್ಪ ಬಂದವರೆ ಅಂತ ಹೇಳಿ ಅಪ್ಪನನ್ನು ಕರೆದುಕೊಂಡು ಬಾ ಅಂತ ಕಳುಹಿಸಿ 'ಕಾಫಿ ಮಾಡಲೋ, ಟೀ ಮಾಡಲೋ...' ಎಂದು ಕೇಳಿದಳು. 'ಏನೂ ಬೇಡಾ...' ಎಂದು ಕೇಶವ ಅನ್ಯಮನಸ್ಕನಾಗಿ ನುಡಿದದ್ದು ಯಾಕೆಂದು ಸಂಪಿಗಮ್ಮನಿಗೆ ತಿಳಿಯಲಿಲ್ಲ. ಅಷ್ಟು ಹೊತ್ತಿಗೆ ಬೋರ್‌ವೆಲ್‌ನಲ್ಲಿ ನೀರು ತರಲು ಹೋಗಿದ್ದ ಅಣ್ಣನ ಇನ್ನಿಬ್ಬರು ಹೆಣ್ಣುಮಕ್ಕಳು ಸುಶೀಲ ಮತ್ತು ಸಾವಿತ್ರಿ ಸೊಂಟದಲ್ಲಿರಿಸಿಕೊಂಡಿದ್ದ ಬಿಂದಿಗೆಯೊಂದಿಗೆ ಒಳಗೆ ಬಂದು 'ಚೆನ್ನಾಗಿದೀಯಾ ಚಿಕ್ಕಪ್ಪಾ... ಚಿಕ್ಕಮ್ಮ, ಸುನಿ ಮತ್ತೆ ಪಾಪು ಎಲ್ಲಾ ಚೆನ್ನಾಗಿದಾರಾ...' ಎಂದು ಸಡಗರದಿಂದ ವಿಚಾರಿಸಿದರು. ಅದನ್ನು ಕಂಡೇ ಕೇಶವನಿಗೆ ಅರ್ಧ ಬಾಯಿ ಕಟ್ಟಿತ್ತು. 'ಹೂಂ ಚೆನ್ನಾಗಿದಾರೆ' ಎಂದಷ್ಟೇ ಹೇಳಿ ಮಾತು ಮುಂದುವರೆಸದೆ ಸುಮ್ಮನಾದ. ಚಿಕ್ಕಪ್ಪ ಯಾಕೋ ಮುಗುಮ್ಮಾಗಿದ್ದಾರೆ ಎಂದು ತಿಳಿದ ಸುಶೀಲ ಮತ್ತು ಸಾವಿತ್ರಿ ಹೆಚ್ಚೇನೂ ಮಾತನಾಡದೆ ನೀರು ತುಂಬಿದ್ದ ಬಿಂದಿಗೆಗಳೊಂದಿಗೆ ಒಳಗೆ ಹೋದರು.

ತೋಟದಲ್ಲಿ ಕೆಲಸ ಮಾಡುತ್ತಿದ್ದ ಕೃಷ್ಣೇಗೌಡ ತನ್ನ ತಮ್ಮ ಬಂದಿರುವ ಸುದ್ದಿ ತಿಳಿದು ಕೆಲಸ ನಿಲ್ಲಿಸಿ ಮನೆಯತ್ತ ನಡೆದು ಬಂದ. ಎಂದೂ ಫೋನು ಮಾಡದೇ ಬರದವನು ಇದ್ಯಾಕೆ ದಿಢೀರನೇ ಬಂದವನೇ ಎಂಬುದು ಅವನಿಗೆ ತಿಳಿಯಲಿಲ್ಲ. ಒಳಗೆ ಬಂದು ಹೆಗಲ ಮೇಲಿದ್ದ ಟವಲನ್ನು ಕೈಯ್ಯಲ್ಲಿ ಹಿಡಿದು ಕೇಶವ ಕುಳಿತಿದ್ದ ಕುರ್ಚಿಯ ಪಕ್ಕದಲ್ಲಿದ್ದ ಕುರ್ಚಿಯನ್ನು ಅತ್ತ ಎಳೆದುಕೊಂಡು ಕುಳಿತು 'ಚೆನ್ನಾಗಿದೀಯೇನೋ... ಮನೆ ಕಡೆ ಎಲ್ಲಾ ಚೆನ್ನಾಗಿದ್ದಾರಾ...' ಎಂದು ಮುಗುಮ್ಮಾಗಿ ಕುಳಿತಿದ್ದ ತಮ್ಮನನ್ನು ಮಾತನಾಡಿಸಿದ. 'ಹ್ಞೂಂ... ಎಲ್ಲಾ ಚೆನ್ನಾಗವರೆ...' ಎಂದ ಕೇಶವ ತಾನು ಹೇಳಬೇಕೆಂದಿರುವ ವಿಷಯವನ್ನು ಹೇಗೆ ಶುರು ಮಾಡುವುದೆಂದು ತಿಳಿಯದೆ ಮೌನವಾಗಿ ಕುಳಿತುಕೊಂಡ. ಇತ್ತೀಚೆಗೆ ಯಾಕೋ ಏನೋ ತನ್ನ ತಮ್ಮ ಮೊದಲಿನಂತಿಲ್ಲ ಎಂಬುದನ್ನು ತಿಳಿದುಕೊಂಡಿದ್ದ ಕೃಷ್ಣೇಗೌಡ 'ಇನ್ನೇನು ಸಮಾಚಾರ...' ಎಂದವನು ಚಡ್ಡಿಯ ಜೇಬಿನಲ್ಲಿದ್ದ ಬೀಡಿಯೊಂದನ್ನು ತೆಗೆದು ಬಾಯಿಗಿಟ್ಟುಕೊಂಡು ಕಡ್ಡಿ ಗೀರಿ ಹಚ್ಚಿಕೊಂಡ.

ಕೇಶವ ಸುಮ್ಮನೆ ಗಲ್ಲದ ಮೇಲೆ ಕೈಯ್ಯಾಡಿಸುತ್ತಾ ಹೇಳಬೇಕಾದುದನ್ನು ಹೇಳಲು ತಿಣುಕಾಡುತ್ತಾ 'ನಿನ್ನತ್ರ ಸ್ವಲ್ಪ ಮಾತಾಡಬೇಕಿತ್ತು...' ಅಂದ. ಮರದ ಕುರ್ಚಿಯಲ್ಲಿ ಹಿಂದಕ್ಕೆ ಜರುಗಿ ಸರಿಯಾಗಿ ಕುಳಿತ ಕೃಷ್ಣೇಗೌಡ 'ಅದೇನು ಹೇಳು...' ಎನ್ನುವಂತೆ ಕೇಶವನ ಮುಖವನ್ನೇ ನೋಡಿದ. ಅಣ್ಣ ತನ್ನನ್ನೇ ದಿಟ್ಟಿಸುವುದನ್ನು ಎದುರಿಸಲಾಗದೇ ಮುಖ ಕೆಳಗೆ ಮಾಡಿ